QUESTIONNAIRE.

ಪ್ರಶ್ನಾವಳಿ.

I. GENERAL.

ಸಾಮಾನ್ಯ.

1. It is proposed to define Middle Class Unemployment as follows :—

"The Educated Middle Class comprises those persons who have received some form of Secondary or Higher education and are not sufficiently well off to dispense with earning their own living ; and by unemployment is meant either lack of employment or insufficient employment in the sense that it either does not yield a wage commensurate with the qualifications of the employee or that it does not occupy the full time of the employee and compels him to waste a part of it in idleness."

Would you agree? If not, what alternative definition would you suggest?

೧. ಮಧ್ಯಮ ತರಗತಿಯವರಿಗೆ ಕೆಲಸಗಳು ದೊರೆಯದೆ ಇವೆಯೆಂಬುದಕ್ಕೆ ಹೀಗೆ ಅರ್ಥಮಾಡಬೇಕೆಂದು ಉದ್ದೇಶಿಸಲಾಗಿದೆ :—

"ವಿದ್ಯಾವಂತರಾದ ಮಧ್ಯಮ ವರ್ಗತಿಯ ಜನರು ಎಂದರೆ, ನೆಕೆಂಡರಿ ವಿದ್ಯಾಭ್ಯಾಸವನ್ನಾಗಲಿ ಪ್ರೌಢವಿದ್ಯಾಭ್ಯಾಸವನ್ನಾಗಲಿ ಮಾಡಿದವರಾಗಿಯೂ ಮತ್ತು ತಾವೇ ಸ್ವಂತವಾಗಿ ಹಣವನ್ನು ಸಂಪಾದಿಸದೆ ಇದ್ದರೂ ಜೀವನವು ತೊಂದರೆಯಿಲ್ಲದೆ ನಡೆದು ಹೋಗುವಷ್ಟು ಮಟ್ಟಿನ ಹಣಕಾಸಿನ ಅನುಕೂಲವಿಲ್ಲದವರಾಗಿಯೂ ಇರತಕ್ಕ ಜನರೆಂದು ಭಾವಿಸಬಹುದಾಗಿದೆ; ಕೆಲಸಗಳು ದೊರೆಯದೆ ಇವೆಯೆಂದರೆ ಉದ್ಯೋಗವೇ ಸಿಕ್ಕದೆ ಇರುವುದೆಂದೂ ಅಥವಾ ತಕ್ಕಷ್ಟು ಉದ್ಯೋಗವಿಲ್ಲವೆಂದೂ ಅರ್ಥ. ತಕ್ಕಷ್ಟು ಉದ್ಯೋಗವಿಲ್ಲವೆಂದರೆ ಅದರಿಂದ ನೌಕರನ ಅರ್ಹತೆಗೆ ತಕ್ಕಂತೆ ವೇತನ ದೊರೆಯುವುದಿಲ್ಲವೆಂದೂ ಅಥವಾ ನೌಕರನ ಕಾಲವೆಲ್ಲವನ್ನೂ ಆದಕ್ಕಾಗಿಯೇ ವಿನಿಯೋಗಿಸುವಷ್ಟು ಕೆಲಸವಿಲ್ಲದೆ ಆವನು ತನ್ನ ಕಾಲದಲ್ಲಿ ಒಂದು ಭಾಗವನ್ನು ಸುಮ್ಮನೆ ವ್ಯರ್ಥವಾಗಿ ಕಳೆಯಬೇಕಾಗಿದೆಯೆಂದೂ ತಾತ್ಪರ್ಯವು.

ಈ ಅರ್ಥ ವಿವರಣೆಯು ತಮಗೆ ಸಮ್ಮತವೆ ? ಸಮ್ಮತವಲ್ಲದಿದ್ದರೆ, ಅದಕ್ಕೆ ಬದಲಾಗಿ ಬೇರೆ ಯಾವ ಅರ್ಥವಿವರಣೆಯನ್ನು ತಾವು ಸೂಚಿಸುತ್ತೀರಿ ?

2. In your opinion, is there unemployment? If there is, what is the intensity of unemployment? Is it more intense among people trained for certain occupations than among others? Has the intensity anything to do with training or nature of educational equipment?

೨. ಜನಗಳಿಗೆ ಕೆಲಸ ದೊರೆಯದೆ ನಿಜವಾಗಿಯೂ ಕಷ್ಟವಾಗಿದೆಯೆಂಬುದಾಗಿ ತಾವು ಅಭಿಪ್ರಾಯ ಪಡುವಿರಾ ? ಹೀಗೆ ತಾವು ಅಭಿಪ್ರಾಯ ಪಡುವುದಾದರೆ ಕೆಲಸ ದೊರೆಯದ ಈ ಕಷ್ಟವು ಎಷ್ಟುಮಟ್ಟಿಗೆ ಇದೆಯೆಂದು ತಾವು ಭಾವಿಸಿರುವಿರಿ ? ಕೆಲವು ಕಸಬುಗಳಲ್ಲಿ ಕೆಲಸ ಮಾಡುವುದಕ್ಕೆ ಶಿಕ್ಷಣವನ್ನು ಪಡೆದಿರುವವರಿಗೆ ಉದ್ಯೋಗ ದೊರೆಯದ ಕಷ್ಟವು ಇತರರಿಗಿಂತ ಹೆಚ್ಚಾಗಿದೆಯೆ ? ವಿದ್ಯಾಭ್ಯಾಸ ವಿಧಾನಕ್ಕೂ ಕೆಲಸ ದೊರೆಯದ ತೊಂದರೆಗೂ ಸಂಬಂಧವೇನಾದರೂ ಇವೆಯೆ ? ಯಾವುದಾದರೂ ಪ್ರತ್ಯೇಕವಿಧದ ವಿದ್ಯಾಭ್ಯಾಸ ಕ್ರಮವನ್ನು ಅವಲಂಬಿಸಿದ ಕಾರಣದಿಂದ ಜನರಿಗೆ ಹೀಗೆ ಕೆಲಸ ದೊರೆಯದ ತೊಂದರೆಯು ವಿಶೇಷವಾಗಿದೆಯೆ ?

3. What, in your opinion, are the causes of this unemployment?

(Some of the causes suggested are defective system of education, Social causes; want of organisation both among the employers and those in search of employment).

೩. ಯಾವ ಕಾರಣಗಳಿಂದ ಈಗ ಕೆಲಸ ದೊರೆಯದ ಕಷ್ಟವುಂಟಾಗಿದೆಯೆಂದು ತಾವು ಭಾವಿಸಿದ್ದೀರಿ ?

(ಕೆಲಸಗಳು ದೊರೆಯದೆ ಹೋಗಿರುವುದಕ್ಕೆ ಈಗ ಕೆಲವು ಕಾರಣಗಳು ಸೂಚಿಸಲ್ಪಡುತ್ತಾ ಇವೆ. ಅವು ಯಾವುವೆಂದರೆ : ವಿದ್ಯಾಭ್ಯಾಸ ಕ್ರಮವು ಸರಿಯಾಗಿಲ್ಲದೆ ಅದರಲ್ಲಿ ನ್ಯೂನತೆಯಿರುವುದು, ಸಾಮಾಜಿಕ ಕಾರಣಗಳು ; ಕೆಲಸಕ್ಕೆ ಜನಗಳನ್ನು ನೇಮಿಸಿಕೊಳ್ಳುವವರಲ್ಲಿಯೂ, ಕೆಲಸವನ್ನು ಹುಡುಕಿಕೊಂಡು ಹೋಗುವವರಲ್ಲಿಯೂ ಒಳ್ಳೆಯ ವ್ಯವಸ್ಥೆಯು ಇಲ್ಲದಿರುವುದು.)

4. What are the avenues of employment in which there are more people seeking employment than can be possibly entertained; and what (if any), are the occupations in which it is difficult to get men for employment?

೪. ಕೆಲಸಕ್ಕೆ ಎಷ್ಟು ಜನರನ್ನು ನೇಮಿಸಿಕೊಳ್ಳುವುದಕ್ಕೆ ಸಾಧ್ಯವಿರುವುದೋ ಅದಕ್ಕಿಂತಲೂ ಹೆಚ್ಚು ಜನರು ಕೆಲಸಗಳು ಬೇಕೆಂದು ಮೇರಾದುತ್ತಿರುವ ಕಸಬುಗಳು ಯಾವುವು? ಕೆಲಸಕ್ಕೆ ನೇಮಿಸಿಕೊಳ್ಳುವುದಕ್ಕೆ ಅರ್ಹರಾದ ಜನಗಳು ಸಿಕ್ಕುವುದೇ ಕಷ್ಟವಾಗಿರುವ ಕಸಬುಗಳು ಯಾವುವಾದರೂ ಉಂಟೆ? ಅವು ಯಾವುವು?

5. What are the remedies that you would suggest for unemployment?

(Some of the remedies suggested are vocational training in schools; Technical education; Employment of Information Bureau in schools and colleges (literary, technical and professional), in Government Offices, private employment agencies, diversion of middle classes to agriculture, mechanical occupations, trade and commerce, Co-operative agriculture; Farm Colonies for middle classes, Co-operative production and distribution). Please offer your remarks on these remedies suggested, and please suggest any other remedies that may occur to you.

೫. ಕೆಲಸಗಳು ದೊರೆಯದ ಕಷ್ಟವು ನಿವಾರಣೆಯಾಗಲು ತಾವು ಯಾವ ಯಾವ ಸಲಹೆಗಳನ್ನು ಸೂಚಿಸುವಿರಿ?

(ಈಗ ಕೆಲವು ಉಪಾಯಗಳು ಸೂಚಿಸಲ್ಪಟ್ಟಿವೆ. ಅವು ಯಾವುವೆಂದರೆ, ಸ್ಕೂಲುಗಳಲ್ಲಿ ಕಸಬುಗಳಲ್ಲಿ ಶಿಕ್ಷಣಕೊಡುವುದು; ಶಿಲ್ಪಶಾಸ್ತ್ರ ಮೊದಲಾದ "ಟೆಕ್ನಿಕಲ್" ವಿಷಯಗಳನ್ನು ಅಭ್ಯಾಸ ಮಾಡಿಸುವುದು; ಸಾಹಿತ್ಯ ಸಂಬಂಧವಾದ ಸ್ಕೂಲುಗಳು ಪಾಠಿಭಾಷಿಕ ವಿಷಯಗಳನ್ನು ಬೋಧಿಸುವ ಸ್ಕೂಲುಗಳು ಮತ್ತು ಕಸಬುದಾರಿ ಸ್ಕೂಲುಗಳು, ಇವುಗಳಲ್ಲಿಯೂ, ಮತ್ತು ಇದೇ ಬಾಬುಗಳ ಕಾಲೇಜುಗಳಲ್ಲಿಯೂ, ಸರ್ಕಾರೀ ಆಫೀಸುಗಳಲ್ಲಿಯೂ, ಜನಗಳಿಗೆ ಕೆಲಸಗಳನ್ನು ಹವಣಿಸಿಕೊಡುವ ಮತ್ತು ನೌಕರಿಗಳಿಗೆ ಸಂಬಂಧಪಟ್ಟ ವರ್ತಮಾನಗಳನ್ನು ಶೇಖರಿಸಿ ಒದಗಿಸುವ ಸಂಸ್ಥೆಗಳನ್ನು ಸ್ಥಾಪಿಸುವುದು. ಖಾಸಗಿ ಜನಗಳಿಗೆ ಕೆಲಸಕ್ಕೆ ಜನರನ್ನು ಒದಗಿಸುವ ಏರ್ಪಾಡಿಗಳನ್ನು ಏರ್ಪಡಿಸುವುದು, ಮಧ್ಯಮ ತರಗತಿಯ ಜನರು ವ್ಯವಸಾಯವೃತ್ತಿಯನ್ನು ವಲಂಬಿಸುವಂತೆ ಮಾಡುವುದು; ಸಣ್ಣಪುಟ್ಟ ಕೈಗಾರಿಕೆಯ ವೃತ್ತಿಗಳನ್ನು ರೂಢಿಗೆ ತರುವುದು, ವಾಣಿಜ್ಯ ವೃತ್ತಿಯನ್ನು ಜನರು ಹೆಚ್ಚುಹೆಚ್ಚಾಗಿ ಅವಲಂಬಿಸುವಂತೆ ಮಾಡುವುದು. ಪರಸ್ಪರ ಸಹಾಯಕ್ರಮದಲ್ಲಿ ಭೂ ವ್ಯವಸಾಯವು ನಡೆಯುವಂತೆ ಮಾಡುವುದು, ಮಧ್ಯಮ ತರಗತಿಯವರಿಗೆ ಒಟ್ಟಿಗೆ ಭೂ ಸ್ಥಿತಿಗಳನ್ನು ಏರ್ಪಡಿಸಿಕೊಟ್ಟು ಅವರು ಅಲ್ಲಿ ನೆಲೆಸಿ ಬೇಸಾಯ ಮಾಡುವಂತೆ ಏರ್ಪಾಡು ಮಾಡುವುದು. ಸಹಕಾರ ಕ್ರಮದಲ್ಲಿ ಧಾನ್ಯಗಳೇ ಮುಂತಾದವುಗಳನ್ನು ಬೆಳೆದು, ಸಹಕಾರ ಕ್ರಮದಲ್ಲಿಯೇ ಅವುಗಳ ಮಾರಾಟವು ನಡೆಯುವಂತೆ ಮಾಡುವುದು-ಇವುಗಳೆಲ್ಲಾ ಸೂಚಿಸಲ್ಪಟ್ಟಿವೆ.) ಹೀಗೆ ಸೂಚಿಸಲ್ಪಟ್ಟಿರುವ ನಿವಾರಣೋಪಾಯಗಳ ವಿಷಯದಲ್ಲಿ ತಮ್ಮ ಅಭಿಪ್ರಾಯವೇನೆಂಬುದನ್ನು ಸೂಚಿಸಬೇಕೆಂದು ಪ್ರಾರ್ಥನೆ. ಜನರಿಗೆ ಉದ್ಯೋಗಗಳು ದೊರೆಯದೆ ಕಷ್ಟವಾಗಿರುವುದನ್ನು ತಪ್ಪಿಸಲು ತಮಗೆ ತೋರಬಹುದಾದ ಇತರ ಮಾರ್ಗಗಳನ್ನೂ ತಿಳಿಸಬೇಕೆಂದು ಬಿನ್ನಹ.

6. What are the difficulties in the way of creating more avenues of employment, and how would you propose to meet them?

೬. ಜನಗಳಿಗೆ ಉದ್ಯೋಗಗಳು ದೊರೆಯುವಂಥಾ ಹೊಸ ಹೊಸ ಏರ್ಪಾಟುಗಳನ್ನು ಇನ್ನೂ ಹೆಚ್ಚಾಗಿ ರಚಿಸುವುದರಲ್ಲಿ ಕಾರ್ಯಕ್ಕೆ ಯಾವ ಯಾವ ಕಷ್ಟಗಳಿವೆ? ಆ ಕಷ್ಟಗಳ ನಿವಾರಣೆಗೆ ತಾವು ಯಾವ ಮಾರ್ಗಗಳನ್ನು ಸೂಚಿಸುತ್ತೀರಿ?

QUESTIONNAIRE.
ಪ್ರಶ್ನಾವಳಿ.

II. EMPLOYERS.
(ಕೆಲಸಕ್ಕೆ ಜನಗಳನ್ನು ನೇಮಿಸಿಕೊಳ್ಳುವರು ಉತ್ತರ ಹೇಳಬೇಕಾದ ಅಂಶಗಳು.)

1. Name. Address. ೧. ಹೆಸರು. ವಿಳಾಸ.	
Please state.— (*a*) Business in which engaged :— Agriculture. Industries. Commerce. (Specify the sub-division of any of these industries in which you are engaged). (*b*) Number of men, women and young persons in your business. (*c*) Number of posts in your business for which general education or any technical training is required. (*d*) Number of vacancies in (*c*) and qualifications required for employment therein. (*e*) Salaries or wages offered for them. ೨. ತಾವು ಕೆಲವು ಅಂಶಗಳನ್ನು ತಿಳಿಸಬೇಕೆಂದು ಪ್ರಾರ್ಥನೆ. ಅವುಗಳು ಯಾವುವೆಂದರೆ :— (ಎ) ತಾವು ನಡೆಸುತ್ತಿರುವ ಉದ್ಯೋಗವು:— ವ್ಯವಸಾಯವೆ? ಕೈಗಾರಿಕೆಯೆ? ವ್ಯಾಪಾರವೆ? (ಈ ಮೂರರಲ್ಲಿ ಯಾವುದಕ್ಕಾದರೂ ಸೇರಿದಂತೆ ನೀವು ನಡೆಸುತ್ತಿರುವ ಉದ್ಯೋಗವು ಯಾವುದೆಂಬುದನ್ನು ದಯೆಯಿಟ್ಟು ತಿಳಿಸಿರಿ.) (ಬಿ) ತಮ್ಮ ಕಸಬಿನ ಸಂಬಂಧದಲ್ಲಿ ತಾವು ಕೆಲಸಕ್ಕೆ ನೇಮಿಸಿಕೊಂಡಿರುವ ಗಂಡನರು, ಹೆಂಗನರೆ ಮತ್ತು ಹುಡುಗರ ಸಂಖ್ಯೆಯು ಎಷ್ಟು? (ಸಿ) ತಮ್ಮ ಉದ್ಯೋಗದಲ್ಲಿ ಸಾಧಾರಣ ವಿದ್ಯಾಭ್ಯಾಸವಾಗಲಿ ಅಥವಾ ಕಸಬುದಾರಿ ಶಿಕ್ಷಣವಾಗಲಿ ಅವಶ್ಯವಾಗಿರುವ ಕೆಲಸಗಳ (ನೌಕರಿಗಳ) ಸಂಖ್ಯೆಯು ಎಷ್ಟು? (ಡಿ) ಮೇಲಣ (ಸಿ) ಕಲಮಿನಲ್ಲಿ ಸೂಚಿಸಿರುವ ಕೆಲಸಗಳಲ್ಲಿ (ನೌಕರಿಗಳಲ್ಲಿ) ಖಾಲಿಯಾಗಿರುವವುಗಳ ಸಂಖ್ಯೆಯು ಎಷ್ಟು? ಅವಕ್ಕೆ ನೇಮಿಸಲ್ಪಡತಕ್ಕವರಿಗೆ ಯಾವ ಯಾವ ಅರ್ಹತೆಗಳಿರಬೇಕು? ಪಕ್ಷಾಂತರ (ಇ) ಅವುಗಳಿಗಾಗಿ ಕೊಡುವ ಸಂಬಳಗಳು ಅಥವಾ ಕೂಲಿಯ ಮೊಬಲುಗುಗಳು ಎಷ್ಟೆಷ್ಟು?	
3. Are you in favour of the establishment of a bureau for bringing persons in need of employment in touch with employers? If so, would you co-operate with such an organisation? ೩. ನೌಕರಿಯನ್ನು ಅಪೇಕ್ಷಿಸುವ ಜನಗಳಿಗೂ, ನೌಕರಿ ನೇಮಿಸಿಕೊಳ್ಳುವ ಜನಗಳಿಗೂ ಪರಿಚಯಮಾಡಿಕೊಟ್ಟು ತನ್ಮೂಲಕ ಜನರಿಗೆ ಉದ್ಯೋಗಗಳು ದೊರೆಯುವಂತೆ ಮಾಡುವ ಕಚೇರಿಯೊಂದು ಸ್ಥಾಪಿಸಲ್ಪಡಬೇಕೆಂಬುದನ್ನು ತಾವು ಒಪ್ಪುವಿರಾ? ಅದನ್ನು ಸ್ಥಾಪಿಸಿದರೆ ತಾವು ಅದರೊಡನೆ ಸಹಕರಿಸಿ ವರ್ತಿಸುವಿರಾ?	
4. What are the facilities which you think might be created to fit people for employment in the business in which you are interested? ೪. ತಮಗೆ ಸೇರಿದ ಕಸಬಿನ ಸಂಬಂಧದಲ್ಲಿ ಕೆಲಸಕ್ಕೆ ನೇಮಿಸಲ್ಪಡುವುದಕ್ಕೆ ಅರ್ಹರಾಗುವಂತೆ ಜನರನ್ನು ತರಬೇತು ಮಾಡುವುದಕ್ಕಾಗಿ ಯಾವ ಯಾವ ಸೌಕರ್ಯಗಳನ್ನು ಒದಗಿಸಿ ಕೊಡಬಹುದೆಂದು ತಾವು ಅಭಿಪ್ರಾಯಪಡುತ್ತೀರಿ.	

QUESTIONNAIRE.
ಪ್ರಶ್ನಾವಳಿ.

III. CANDIDATES FOR EMPLOYMENT.
ಕೆಲಸವನ್ನು ಅಪೇಕ್ಷಿಸುವ ಉಮೇದುವಾರರು ಉತ್ತರ ಹೇಳಬೇಕಾದ ಅಂಶಗಳು.

N.B.—*If you want your answers to be treated as Confidential, please say so.*

ಸೂಚನೆ.—ತಮ್ಮ ಉತ್ತರಗಳು ಬಹಿರಂಗಪಡಿಸಲ್ಪಡಕೂಡದೆಂಬುದು ನಿಮ್ಮ ಅಪೇಕ್ಷೆಯಾಗಿದ್ದರೆ, ಆ ಸಂಗತಿಯನ್ನು ತಿಳಿಸಬೇಕೆಂದು ಬಿನ್ನಹ.

1. Name, Age, Sex, Caste ೧. ಹೆಸರು, ವಯಸ್ಸು, ಹೆಂಗಸೆ ಅಥವಾ ಗಂಡಸೆ? ಜಾತಿ	
2. Qualifications. General. Vocational. Professional. ೨. ಅರ್ಹತೆಗಳು. ಸಾಮಾನ್ಯ ವಿದ್ಯಾಭ್ಯಾಸ. ಕಸಬುದಾರಿ ಶಿಕ್ಷಣ. ಉದ್ಯೋಗ ಸಂಬಂಧವಾದ ಅರ್ಹತೆ.	
3. Resources. Land. Capital. ೩. ಸಾಧನಸಂಪತ್ತುಗಳು. ಜಮೀನು. ಬಂಡವಾಳವಾಗಿ ಒದಗಬಹುದಾದ ಪೊಬಲಗು.	
4. *Special aptitude and preference.* Agricultural. Industrial. Commercial. Educational Service. Other Government Service. ೪. ವಿಶೇಷ ಅರ್ಹತೆಯೂ, ಅಭಿರುಚಿಯೂ ಇರುವುದು ಭೂವ್ಯವಸಾಯ ವೃತ್ತಿಯಲ್ಲೆ? ಕೈಗಾರಿಕೆಯಲ್ಲೆ? ವಾಣಿಜ್ಯದಲ್ಲೆ? ವಿದ್ಯಾಭ್ಯಾಸ ಇಲಾಖೆಯ ಕೆಲಸದಲ್ಲೆ? ಇತರ ಸರ್ಕಾರಿ ನೌಕರಿಯಲ್ಲೆ?	
5. Previous employment, if any. [State (1) pay earned, and (2) cause of termination of employment]. ೫. ಹಿಂದೆ ಯಾವುದಾದರೂ ಕೆಲಸದಲ್ಲಿದ್ದರೆ ಅದು ಯಾವುದೆಂಬುದನ್ನು ತಿಳಿಸಿ; [(೧) ನೀವು ಪಡೆಯುತ್ತಿದ್ದ ಸಂಬಳವನ್ನೂ ಮತ್ತು (೨) ನಿಮ್ಮ ನೌಕರಿಯು ನಿಂತುಹೋದುದಕ್ಕೆ ಕಾರಣವನ್ನೂ ತಿಳಿಸಿ.]	
6. What are you doing now for subsistence? ೬. ಜೀವನಕ್ಕೆ ಈಗ ಏನು ಮಾಡುತ್ತಿದ್ದೀರಿ?	

7. In case you are responsible for the support of a family, how many are dependent on you? What do you now do for a living ? ೭. ನೀವು ಒಂದು ಕುಟುಂಬವನ್ನೇ ರಕ್ಷಿಸುತ್ತಿರುವ ಪಕ್ಷಕ್ಕೆ ನಿಮ್ಮ ಪೋಷಣೆಯಲ್ಲಿರುವವರು ಎಷ್ಟು ಮಂದಿ ಗಳಿದ್ದಾರೆ ? ನೀವು ಜೀವನಕ್ಕೆ ಈಗ ಏನು ಮಾಡುತ್ತಿದ್ದೀರಿ ?	
8. If you are depending on any one else, what is the average monthly income of the earning member, and how many others are dependent on him ? ೮ ನೀವು ಮತ್ತೊಬ್ಬರ ಅವಲಂಬನೆಯಲ್ಲಿ ಜೀವಿಸುತ್ತಿದ್ದರೆ, ನಿಮ್ಮ ಕುಟುಂಬದಲ್ಲಿ ಹಣ ಸಂಪಾದನೆ ಮಾಡುತ್ತಿರುವವರಿಗೆ ತಿಂಗಳಿಗೆ ಸರಾಸರಿ ಎಷ್ಟು ವರಮಾನವು ಬರುತ್ತಾ ಇದೆ. ಅವರ ರಕ್ಷಣೆಯಲ್ಲಿ ಮತ್ತೆಷ್ಟುಜನ ರಿದ್ದಾರೆ ?	
9. Are you prepared to work on a Farm, or as a wage earner in an Industrial or Commercial concern ? What is the minimum wage you expect ? ೯. ಭೂ ವ್ಯವಸಾಯದ ಕೆಲಸವು ಸಿಕ್ಕಿದರೆ ಅದನ್ನು ಮಾಡುವುದಕ್ಕೆ ಒಪ್ಪುತ್ತೀರೊ ? ಅಥವಾ ಒಂದು ಕೈಗಾರಿಕೆಯ ಅಥವಾ ವಾಣಿಜ್ಯದ ಕನಬಿನಲ್ಲಿ ನಂಬಳಕ್ಕೆ ಕೆಲಸ ಮಾಡುತ್ತೀರೊ ? ಕನಿಷ್ಠ ಪಕ್ಷ ಎಷ್ಟು ನಂಬಳವು ದೊರೆಯಬೇಕೆಂದು ಕೇಳುತ್ತೀರಿ ?	
10. Are you living in a village or a municipal town ? Are you willing to adopt agriculture as an occupation ? If so, what facilities would you require ? ೧೦. ನೀವು ಹಳ್ಳಿಯಲ್ಲಿ ವಾಸ ಮಾಡುತ್ತಿದ್ದೀರೊ? ಅಥವಾ ಮುನಿಸಿಪಾಲಿಟಿ ಇರುವ ಪಟ್ಟಣದಲ್ಲಿ ವಾಸಮಾಡುತ್ತಿದ್ದೀರೊ ? ಭೂ ವ್ಯವಸಾಯವನ್ನೇ ಜೀವನ ವೃತ್ತಿಯನ್ನಾಗಿ ಅವಲಂಬಿಸುವುದಕ್ಕೆ ನಮಗೆ ಮನಸ್ಸಿದೆಯೊ ? ಹಾಗಿದ್ದರೆ, ತಮಗೆ ಏನೇನು ಅನುಕೂಲಗಳು ಬೇಕು ?	
11. What do you think should be done for people like you to find employment ? ೧೧. ತಮ್ಮಂತೆ ಇರತಕ್ಕ ಜನರಿಗೆ ಉದ್ಯೋಗವು ಸಿಕ್ಕಬೇಕಾದರೆ ಯಾವ ಏರ್ಪಾಡು ಆಗಬೇಕೆಂಬುದು ನಿಮ್ಮ ಅಭಿಪ್ರಾಯ ?	

QUESTIONNAIRE.

ಪ್ರಶ್ನಾವಳಿ.

IV. AGRICULTURE.

ವ್ಯವಸಾಯ ವೃತ್ತಿಯವರು ಮಾತ್ರವೇ ಉತ್ತರ ಹೇಳಬೇಕಾದ ಅಂಶಗಳು.

(*Special*).

1. Name. ೧. ಹೆಸರು	
2. How much land do you own? ೨. ನಿಮಗೆ ಎಷ್ಟು ಜಮೀನಿದೆ?	
3. Does your holding admit of the employment of a trained man to assist you in farming? ೩. ವ್ಯವಸಾಯದಲ್ಲಿ ತರಬೇತಾದ ಒಬ್ಬ ಮನುಷ್ಯನನ್ನು ತಮ್ಮ ಜೀರಾಯಿತು ಕೆಲಸಗಳಲ್ಲಿ ತಮಗೆ ಸಹಾಯ ಮಾಡುವುದಕ್ಕಾಗಿ ನೇಮಿಸಿಕೊಳ್ಳಲು ತಮ್ಮ ಭೂ ಸ್ಥಿತಿಯಲ್ಲಿ ಸಾಕಷ್ಟು ಅವಕಾಶ ವಿದೆಯೆ?	
4. Can you spare any land for being leased out on suitable terms? What is the rent you would expect and what are you getting from the land now? ೪. ನಿಮ್ಮ ಜಮೀನಿನಲ್ಲಿ ಯಾವುದನ್ನಾದರೂ ಯುಕ್ತವಾದ ಷರತ್ತು ಗಳ ಮೇಲೆ ಗುತ್ತಿಗೆಗೆ ಕೊಡುವುದಕ್ಕೆ ಸಾಧ್ಯವಿದೆಯೆ? ಹಾಗೆ ಕೊಡುವುದಾದರೆ ತಾವು ಎಷ್ಟು ಗುತ್ತಿಗೆಯನ್ನು ಕೇಳುತ್ತೀರಿ? ಆ ಜಮೀನಿನಿಂದ ಈಗ ತಮಗೆ ಎಷ್ಟು ವರಮಾನವು ಬರುತ್ತಾ ಇದೆ?	
5. If you are working your own estate, are you willing to take educated young people for training or as apprentices? ೫. ತಮ್ಮ ಭೂ ಸ್ಥಿತಿಯ ಕೆಲಸ ಕಾರ್ಯಗಳನ್ನು ತಾವೇ ಸ್ವಂತ ವಾಗಿ ನಿರ್ವಹಿಸುತ್ತಾ ಇರುವ ಪಕ್ಷಕ್ಕೆ ವಿದ್ಯಾವಂತರಾದ ಯುವ ಕರನ್ನು ಕೆಲಸಕ್ಕೆ ಸೇರಿಸಿಕೊಂಡು ವ್ಯವಸಾಯದಲ್ಲಿ ತರಬೇತು ಮಾಡುವಿರಾ? ವ್ಯವಸಾಯ ಕಾರ್ಯಗಳನ್ನು ನಿರ್ವಹಿಸಲು ಅನುಭವವಿಲ್ಲದವರನ್ನು ತಮ್ಮ ಭೂ ಸ್ಥಿತಿಗಳಲ್ಲಿ ಸೇರಿಸಿಕೊಂಡು ಅವರಿಗೆ ಅನುಭವವನ್ನುಂಟುಮಾಡಿಕೊಡುವುದಕ್ಕೆ ತಮಗೆ ಇಷ್ಟವುಂಟೆ?	
6. What do you think of agriculture as an occupation for people with *general* school education? Have you any experience of educated men taking to practical agriculture? ೬. ವ್ಯವಸಾಯಶಾಸ್ತ್ರದಲ್ಲಿ ಪರಿಶ್ರಮವಿಲ್ಲದ (ಸಾಮಾನ್ಯ ವಿದ್ಯಾಭ್ಯಾಸ ಮಾಡಿದ) ಜನರು ಭೂ ವ್ಯವಸಾಯವನ್ನೇ ತಮ್ಮ ಜೀವನ ವೃತ್ತಿ ಯನ್ನಾಗಿ ಅವಲಂಬಿಸುವ ವಿಷಯದಲ್ಲಿ ತಮ್ಮ ಅಭಿಪ್ರಾಯ ವೇನು? ವಿದ್ಯಾವಂತರಾದ ಜನಗಳು ವ್ಯವಸಾಯದ ವೃತ್ತಿ ಯನ್ನೇ ಅವಲಂಬಿಸಿ ಕೆಲಸ ನಡೆಸುತ್ತಿರುವುದು ತಮ್ಮ ಅನುಭವ ದಲ್ಲಿ ತಮಗೇನಾದರೂ ತಿಳಿಯಬಂದಿದೆಯೆ?	

QUESTIONNAIRE.

ಪ್ರಶ್ನಾವಳಿ.

V. COMMERCE AND FINANCE.

ವಾಣಿಜ್ಯ ಮತ್ತು ಹಣಕಾಸಿನ ವಿಷಯಕ್ಕೆ ಸಂಬಂಧಪಟ್ಟ ವೃತ್ತಿಗಳನ್ನು ಅವಲಂಬಿಸಿರತಕ್ಕವರು ಮಾತ್ರವೇ ಉತ್ತರ ಹೇಳಬೇಕಾದ ಅಂಶಗಳು.

(Special.)

1. Name. ೧. ಹೆಸರು.	
2. Nature of business in which you are engaged. ೨. ತಾವು ನಡೆಸುತ್ತಿರುವ ಉದ್ಯೋಗದ ಸ್ವಭಾವ.	
3. Number of people employed otherwise than as menials. ೩. ಜವಾನೀ ಕೆಲಸಗಳಲ್ಲದೆ ಇತರ ಕೆಲಸಗಳಲ್ಲಿ ಎಷ್ಟು ಜನರು ನೇಮಿಸಲ್ಪಟ್ಟಿದ್ದಾರೆ?	
4. The usual qualifications expected in employees, other than menials. ೪. ಜವಾನರುಗಳಲ್ಲದೆ ಇರ್ರ ನೌಕರರಲ್ಲಿ ಸಾಮಾನ್ಯವಾಗಿ ಯಾವ ಯಾವ ಅರ್ಹತೆಗಳಿರಬೇಕು।	
5. How long does it ordinarily take an employee to pick up the work on which you employ him? What is your experience of the relative quickness and handiness of people *with* and *without* general—education? Whom would you prefer? ೫. ಒಬ್ಬ ಮನುಷ್ಯನನ್ನು ತಾವು ಕೆಲಸದಲ್ಲಿ ನೇಮಿಸಿಕೊಂಡರೆ ಆ ಕೆಲಸದಲ್ಲಿ ಅವನು ಚೆನ್ನಾಗಿ ಅನುಭವವನ್ನು ಪಡೆಯುವುದಕ್ಕೆ ಅವನಿಗೆ ಆ ತರುವಾಯ ಸಾಮಾನ್ಯವಾಗಿ ಎಷ್ಟು ಕಾಲವು ಹಿಡಿಯುತ್ತದೆ? ಸಾಮಾನ್ಯ ವಿಧದ ವಿದ್ಯಾಭ್ಯಾಸಮಾಡಿದ ಜನರು ಹೆಚ್ಚು ಜುರುಕಾಗಿ ಜಾಣತನದಿಂದ ಕೆಲಸವನ್ನು ಕಲತು ಕೊಳ್ಳುವರೆ? ಅಥವಾ ಆ ಬಗೆಯ ವಿದ್ಯಾಭ್ಯಾಸವಿಲ್ಲದವರು ಅರೀತಿಯಾಗಿ ಹೆಚ್ಚು ಕುಶಲತೆಯನ್ನು ತೋರಿಸುವರೆ? ಆ ಇಬ್ಬರ ಪೈಕಿ ಯಾರಿಗೆ ತಾವು ಪ್ರಾಶಸ್ತ್ಯವನ್ನು ಕೊಟ್ಟು ಕೆಲಸಕ್ಕೆ ಸೇರಿಸಿಕೊಳ್ಳಲಿಚ್ಛಿಸುವಿರಿ?	
6. Do you think your recruits could be better fitted for your work by a preliminary business training? ೬. ತಾವು ಕೆಲಸಕ್ಕೆ ನೇಮಿಸಿಕೊಳ್ಳುವ ಜನರಿಗೆ ಅದಕ್ಕೆ ಮೊದಲೇ ತಮ್ಮ ಕಸಬಿನಲ್ಲಿ ಸ್ವಲ್ಪಮಟ್ಟಿಗೆ "ರಬೇ"ನ್ನು ಕೊಟ್ಟರೆ ಅಂಥವರು "ಮ್ಮ ಕೆಲಸಕ್ಕೆ ಹೆಚ್ಚು ಅರ್ಹರಾಗಿರುವರೆಂದು ತಾವು ಭಾವಿಸಿರುವಿರಾ?	
7. Are you willing to take apprentices or students for training, and if so, on what conditions? ೭. ಕೆಲಸ ಕಲಿಯಬೇಕೆಂಬ ಉಮೇದುವಾರರನ್ನಾಗಲಿ, ಅಥವಾ ಶಿಕ್ಷಣಹೊಂದುವ ಇಚ್ಛೆಯಿರುವ ವಿದ್ಯಾರ್ಥಿಗಳನ್ನಾಗಲಿ ಕೆಲಸಕ್ಕೆ ಸೇರಿಸಿಕೊಳ್ಳಲು ತಮಗೆ ಇಷ್ಟವುಂಟೆ? ಹಾಗೆ ಇಷ್ಟವಿದ್ದರೆ ತಮ್ಮ ಷರತ್ತುಗಳು ಯಾವುವು?	